OS 85/2021

PW-3

ದಿನಾಂಕಃ **08.08.2022** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ.ಪಿ.ವಿ.ವೈ ವಕೀಲರಿಂದಃ**

ನಾನು ಕೈಮಗ್ಗ ನಡೆಸುತ್ತಿದ್ದೇನೆ. ನನಗೆ 6 ಕೈಮಗ್ಗಗಳಿವೆ. ಸೋಮನಾಥ ಹಾಗೂ ನಾಗರಾಜ ರವರಿಗೆ ಮುಂಚೆ ಕೈ ಮಗ್ಗ ಇದ್ದವು. ಈಗ ಪಾವರ್ ಲೂಮ್ ಹಾಕಿದ್ದಾರೆ. ನಾನು ಮತ್ತು ವಾದಿಯರು ರೇಶ್ಮೆ ಸೀರೆ ನೇಯ್ಗೆ ಮತ್ತು ವ್ಯಾಪಾರ ಮಾಡುತ್ತೇವೆ ಎಂದರೆ ಸರಿ. ಈ ವ್ಯವಹಾರದ ಬಾಬ್ತು ನಮ್ಮ ನಡುವೆ ನೇರವಾದ ಸಂಪರ್ಕವೆ ಇರುತ್ತದೆ. ಸೀರೆ ವ್ಯಾಪಾರದಲ್ಲಿ ಬೆಲೆಗೆ ಸಂಬಂಧಿಸಿದಂತೆ ವಿಚಾರ ಮಾಡಿಕೊಳ್ಳುವ ಮಾತುಕತೆ ಇದ್ದೇ ಇರುತ್ತದೆ ಎಂದರೆ ಸರಿ. ಒಂದು ವೇಳೆ ರೇಶ್ಮೆ ನೂಲು ಅವಶ್ಯಕತೆ ಇದ್ದಾಗ ನೀವು ಅವರಿಗೆ ಕೊಡುವ ಅವರು ನಿಮಗೆ ಕೊಡುವ ವ್ಯವಹಾರ ಇದೆಯಾ ಎಂದರೆ ಸಾಕ್ಷಿ ಹಾಗೇನು ಇಲ್ಲ, ನಾವು ಬೇರೆ ಕಡೆ ತರಿಸುತ್ತೇವೆ ಎಂದು ಉತ್ತರಿಸುತ್ತಾರೆ. ನಾವು ಕುರುಬ ಜನಾಂಗಕ್ಕೆ ಸೇರಿದವರು.

ನಿಮಗೆ ಲಕ್ಷ್ಮೀದೇವಮ್ಮನವರ ಪರಿಚಯ ಇದೆಯಾ ಎಂದರೆ ಸಾಕ್ಷಿ ನನಗೆ ಪರಿಚಯ ಇಲ್ಲ ಎಂದು ಉತ್ತರಿಸುತ್ತಾರೆ. ದಿಃ 27.08.2020 ರಂದು ಸ್ಟಾಂಪ್ ಪೇಪರ್ ತಂದಿರುತ್ತಾರೆ. 2014 ರಲ್ಲಿ ಲಕ್ಷ್ಮೀದೇವಮ್ಮನವರ ಗಂಡ ತೀರಿಕೊಂಡ ನಂತರ ಅವರ ಮಗ ಜಯಕೀರ್ತಿ ತುಮಕೂರಿಗೆ ಅವರನ್ನು ಕರೆದುಕೊಂಡು ಹೋಗಿದ್ದರು ಎಂದರೆ ಸಾಕ್ಷಿ ನಾನು ನೋಡಿಯೇ ಇಲ್ಲ, ಅವರು ಯಾರೆಂದು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದಿಃ 24.07.2020 ರಲ್ಲಿಯೇ ಲಕ್ಷ್ಮೀದೇವಮ್ಮನವರನ್ನು ಅವರ ಮಗ ಶಾರಾದಾಂಬಾ ಟ್ರಸ್ಟ ವೃದ್ಧಾಶ್ರಮಕ್ಕೆ ಸೇರಿಸಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ದಿಃ 24.07.2020 ರಿಂದ ಇಲ್ಲಿಯವರೆಗೂ ಲಕ್ಷ್ಮೀದೇವಮ್ಮ ನವರು ಶಾರಾದಾಂಬಾ ಟ್ರಸ್ಟ ವೃದ್ಧಾಶ್ರಮದಲ್ಲಿಯೇ ಇದ್ದಾರೆ, ಒಂದು ದಿನವು ಅಲ್ಲಿಂದ ಹೊರ ಬಂದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. 2014 ರಂದು ಲಕ್ಷ್ಮೀದೇವಮ್ಮನವರ

ಗಂಡ ತೀರಿಕೊಂಡ ನಂತರದಿಂದ ಈವರೆಗೂ ವೈ ಎನ್ ಹೊಸಕೋಟೆಯಲ್ಲಿ ಇಲ್ಲವೇ ಇಲ್ಲ ಎಂದರೆ ಸಾಕ್ಷಿ ಅವರು ಅಲ್ಲಿಯೇ ಇದ್ದರು ಎಂದು ಉತ್ತರಿಸುತ್ತಾರೆ. ಲಕ್ಷ್ಮೀದೇವಮ್ಮನವರನ್ನು ನೀವು ಯಾವಾಗ ನೋಡಿದ್ದೀರಿ ಎಂದು ಹೇಳಲು ಆಗುವುದಾ ಎಂದರೆ ಸಾಕ್ಷಿ ಅಗ್ರಿಮೆಂಟ ಆದ ನಂತರ ಒಂದೆರಡು ದಿನ ಅಲ್ಲಿಯೇ ಇದ್ದರು ಆಗ ನೋಡಿದ್ದೇನೆ ಎಂದು ಉತ್ತರಿಸುತ್ತಾರೆ. ನೀವು ಲಕ್ಷ್ಮೀದೇವಮ್ಮನವರನ್ನು ಯಾವ ತರ ನೋಡಿದ್ದೀರಿ ಎಂದರೆ ಸಾಕ್ಷಿ ಅವರಿಗೆ ಹುಷಾರಿಲ್ಲದೇ ಇದ್ದಾಗ ಸೋಮನಾಥ ರವರ ತಾಯಿ ಅಟೋದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದುದನ್ನು ನೋಡಿದ್ದೇನೆ ಎಂದು ಉತ್ತರಿಸುತ್ತಾರೆ. ಲಕ್ಷ್ಮೀದೇವಮ್ಮನವರಿಗೆ ಎಷ್ಟು ಜನ ಮಕ್ಕಳು ಎಂಬುದು ನನಗೆ ಗೊತ್ತಿಲ್ಲ. ಲಕ್ಷ್ಮೀದೇವಮ್ಮನವರು ತನಗೆ ಹಣದ ಅವಶ್ಯಕತೆ ಇದೆ ಮನೆ ಮಾರಾಟ ಮಾಡುತ್ತೇನೆ ಎಂದು ನಿಮ್ಮ ಹತ್ತಿರ ಎಂದಾದರೂ ಹೇಳಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಲಕ್ಷ್ಮೀದೇವಮ್ಮನವರು ನೀವು ನೋಡಿಲ್ಲದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ನೋಡಿದ್ದನ್ನೇ ಹೇಳುತ್ತಿದ್ದೇನೆ ಎಂದು ಉತ್ತರಿಸುತ್ತಾರೆ. ಲಕ್ಷ್ಮೀದೇವಮ್ಮನವರಿಗೆ ಯಾವುದೇ ಹಣದ ಅವಶ್ಯಕತೆ ಇರಲಿಲ್ಲ, ಅವರು ಮನೆಯನ್ನು ಮಾರಾಟ ಮಾಡಲು ಯಾವುದೇ ಅಗ್ರಿಮೆಂಟ್ ಬರೆದುಕೊಟ್ಟಿಲ್ಲ ಮತ್ತು ಮುಂಗಡ ಹಣವನ್ನು ಪಡೆದಿಲ್ಲ, ಸೋಮನಾಥ ಮತ್ತು ನಾಗರಾಜ ಮತ್ತು ನೀವು ಎಲ್ಲರೂ ಸೇರಿ ಸುಳ್ಳು ಸೃಷ್ಟಿ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ದಿಃ 09.09.2020 ರಲ್ಲಿ ಲಕ್ಷ್ಮೀದೇವಮ್ಮ ಸೋಮನಾಥ ಮತ್ತು ನಾಗರಾಜರಿಗೆ ಯಾವುದೇ ಅಗ್ರಿಮೆಂಟ ಬರೆದುಕೊಟ್ಟಿಲ್ಲ, ಮತ್ತು ಅವರಿಂದ ಮುಂಗಡ ಹಣವನ್ನು ಪಡೆದಿಲ್ಲ ನೀವೆಲ್ಲರೂ ಸೇರಿ ಕೃತಕವಾಗಿ ದಾಖಲಾತಿಯನ್ನು ಸೃಷ್ಟಿ ಮಾಡಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ಸೋಮನಾಥ ಮತ್ತು ನಾಗರಾಜ ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿದ್ದಾರೆ ಎಂದು ಅವರ ವಿರುದ್ಧ ವೈ ಎನ್ ಹೊಸಕೋಟೆ ಪೋಲಿಸ್ ಠಾಣೆಯಲ್ಲಿ ದೂರು ದಾಖಲಾತಿಗಿತ್ತು ಎಂದರೆ ಸಾಕ್ಷಿ

OS 85/2021

PW-3

ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸೋಮನಾಥ ಮತ್ತು ನಾಗರಾಜ ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.